ಶ್ರೀ ಎಸ್. ಶಿವಪ್ಪ.—ಸರ್ಕಾರದವರು ರಾಗಿ ಮತ್ತು ಬತ್ತಕ್ಕೆ ಎಕರೆಗೆ ಇಷ್ಟು ಖರ್ಚಾಗುತ್ತದೆಂದು ಹೇಳಿದರು. ಈ ಖರ್ಚಿಗೂ, ಬೆಳೆಯಿಂದ ಬರತಕ್ಕಂಥ ಲಾಭಕ್ಕೂ ಸರಿಯಾಗದೆ ಹೋದರೆ ಸರ್ಕಾರದವರು ರೈತರಿಗೆ ಸಬ್‌ಸಿಡಿ ಕೊಡುವುದಕ್ಕೆ ಏರ್ಪಾಡು ಮಾಡಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಏರ್ಪಾಡು ಮಾಡಿದ್ದರೆ food self-sufficiency ಬಂದು ಬಿಡುತ್ತಿತ್ತು. ಪ್ಲಾನಿಂಗ್ ಕಮಿಷನ್ನಿನಲ್ಲಿ ಇದು ಬಹಳ ಚರ್ಚೆಯಾಗಿದೆ. ಕೇಂದ್ರ ಸರ್ಕಾರದವರು ಎಕನಾಮಿಕ್ ಪ್ರೈಸಸ್ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಇಂಡಿಯನ್ ಎಕಾನಮಿಯಲ್ಲಿ 75 ಪರ್ಸೆಂಟ್ ಫಾರ್ಮರ್ಸ್, 25 ಪರ್ಸೆಂಟ್ ಬೇರೆಯವರು ಇದ್ದಾರೆ. ಅಮೇರಿಕದಲ್ಲಿ 90 ಪರ್ಸೆಂಟು ಬೇರೆಯವರು 10 ಪರ್ಸೆಂಟ್ ಫಾರ್ಮರ್ಸ್ ಇದ್ದಾರೆ. In America 10 per cent are farmers whereas in India it is the other way. Therefore the Government is not able to give economic prices to the farmers, ಎಂದು ಹೇಳುತ್ತಾರೆ.

ಶ್ರೀ ಎ. ಮುನಿಯಪ್ಪ.—ಇದೇ ಆಹಾರ ಧಾನ್ಯಗಳನ್ನು ಬೆಳೆಯುತಕ್ಕ ಭೂಮಿಯಲ್ಲಿ ಅಷ್ಟೇ ಖರ್ಚು ಹಾಕಿದರೆ ಕಮರ್ಷಿಯಲ್ ಕ್ರಾಪು ಬೆಳೆದು ಇನ್ನೂ ಹೆಚ್ಚಿನ ಆದಾಯವನ್ನು ತೆಗೆದುಕೊಳ್ಳಬಹುದು. ಇದೇ ಪರಿಸ್ಥಿತಿ ಇದ್ದು reasonable prices ಕೊಡದಿದ್ದರೆ ಆಹಾರ ಧಾನ್ಯಗಳ ಬೆಳೆ ಕಡಿಮೆಯಾಗ ಬಹುದು ಎಂಬುದನ್ನು ಸರಕಾರದವರು ಆಲೋಚನೆ ಮಾಡಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು, ಹೌದು, ತಾವು ಹೇಳುವುದನ್ನೆ ನಾವು ಹೇಳುತ್ತೇವೆ ಕಾರಣಾಂತರದಿಂದ ನಾವು ರೈತರಿಗೆ ಒಂದು ಬೆಳೆ ಇಡಲಿಕ್ಕೆ ಎಷ್ಟು ಖರ್ಚಾಗುತ್ತದೆಯೋ ಅಷ್ಟು ಖರ್ಚನ್ನು ಅವರಿಗೆ ಕೊಡುತ್ತಾ ಇಲ್ಲ, ಅದೇ ಹಿಂದೂ ಸ್ಥಾನದಲ್ಲಿ ವ್ಯವಸಾಯ ಹಿಂದುಳಿದಿರುವುದಕ್ಕೆ ಕಾರಣವಾಗಿದೆ.

ಶ್ರೀ ಎಸ್. ಶಿವಪ್ಪ.—ನಾರ್ಪ್ಲಸ್ ಆಹಾರ ಬೆಳೆಯುತ್ತಿರುವ ಹೊರ ದೇಶಗಳಲ್ಲಿಯೂ ಕೂಡ subsidy ಕೊಡುತ್ತಾ ಇರುವುದರಿಂದ, ಡಿಫಿಸಿಟ್ ಇರುವ ನಮ್ಮ ದೇಶದಲ್ಲಿ subsidy ಕೊಡುವುದು ನ್ಯಾಯವಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ವಿಷಯ. ಆ ವಿಷಯವನ್ನು ಅನೇಕ ಸಲ ಪ್ಲಾನಿಂಗ್ ಕಮಿಷನ್ನಿನವರೊಂದಿಗೆ ಚರ್ಚೆ ಮಾಡಿದ್ದೇವೆ, ಅವರು ಮೈನೂರು ಸರಕಾರಕ್ಕೆ ಹಾಗೆ ಫಿಕ್ಸ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಕೇಂದ್ರ ಸರಕಾರ ನಿಜವಾದ ಒಂದು ಪ್ರೈಸ್ ಫಿಕ್ಸ್ ಮಾಡಬೇಕಾಗುತ್ತದೆ. ನಾವು ಅನೇಕ ಸಲ ಈ ರೀತಿಯ ಒಂದು ತೀರ್ಮಾನಕ್ಕೆ ಬಂದಿದ್ದೇವೆ.

Share Capital of the Taluk Agricultural Produce Marketing Co-operative Society, Ltd., Channapatna.

*Q.—634. Sri B. J. LINGE GOWDA (Channapatna).—

Will the Government be pleased to state:—

(*a*) what is the share capital of the Taluk Agricultural Produce Marketing Co-operative Society, Ltd., Channapatna, as on 28th February 1963;

(*b*) what is the Government share of contribution towards share capital of the society as on 28th February 1963;

(*c*) what is the gross turnover of the total business of the society during the year 1961-62;

(*d*) what is the net profit of the society for 1961-62 ?

A.—Sri RAMAKRISHNA HEGDE (Minister for Co-operation and Development).—

	Rs.	nP.
(*a*)	1,05610-	00
(*b*)	90,000-	00
(*c*)	5,59,939-	66
(*d*)	6,646-	53

ಶ್ರೀ ಬಿ. ಜೆ. ಲಂಗೇಗೌಡ.—ರೂ. 1,05,610ರ ಷೇರು ಬಡವಾಳದಲ್ಲ, individual ryots ನಿಂದ ಎಷ್ಟು ಹಣ ಬಂದಿದೆ ?

†ಶ್ರೀ ರಾಮಕೃಷ್ಣ ಹೆಗ್ಗಡೆ.—90 ಸಾವಿರ ರೂಪಾಯಿ ಬಿಟ್ಟು ಬಾಕಿಯದೆಲ್ಲಾ individual ryots ನಿಂದ ಬಂದಿರುವುದೇ.

1 P.M.

ಶ್ರೀ ಬಿ. ಜೆ. ಲಂಗೇಗೌಡ.—90,000 ರೂಪಾಯಿಗಳಲ್ಲದೆ 28-2-1963 ರಿಂದೀಚೆಗೆ ಇನ್ನೇನಾದರೂ ಷೇರು ಬಂಡವಾಳವನ್ನು ಕೊಟ್ಟಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇಲ್ಲ. 26-2-1963ರಲ್ಲಿ ಕೊಟ್ಟ 10,000 ರೂಪಾಯಿಗಳೂ ಸೇರಿ ರೂ. 90,000 ಕೊಟ್ಟಿದ್ದೇವೆ.

ಶ್ರೀ ಬಿ. ಚನ್ನಬೈರೇಗೌಡ.—5,59,939 ರೂಪಾಯಿಗಳ ವಹಿವಾಟಿಗೆ 6,646 ರೂಪಾಯಿ ಲಾಭ ಸಾಕೇ ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸಾಕೋ ಸಾಲದೋ ಎಂದು ಹೇಳುವಂಥ ಪ್ರಶ್ನೆಯಲ್ಲ. ಆ ಸೊಸೈಟಿ ನರಿಯಾಗಿ ಕೆಲಸ ಮಾಡುತ್ತಿದೆಯೇ ಇಲ್ಲವೇ ಎಂದು ಹೇಳುವಂಥಾದ್ದು. ಮತ್ತು ಕೋ-ಆಪರೇಟಿವ್ ಸೊಸೈಟಿಗಳನ್ನು ಲಾಭ ಸಂಪಾದನೆ ಮಾಡುವ ಉದ್ದೇಶದಿಂದ ಸ್ಥಾಪನೆ ಮಾಡುವುದಿಲ್ಲ.

ಶ್ರೀ ಜಿ. ರಾಮೇಗೌಡ.—1961-62ರಲ್ಲಿ ಈ ಸೊಸೈಟಿಯಲ್ಲಿ ಡಿವಿಡೆಂಡ್ ಎಷ್ಟು ಕೊಟ್ಟಿದ್ದಾರೆ, ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನು ಈಗ ಹೇಳಲು ಸಾಧ್ಯವಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಸೊಸೈಟಿಯಲ್ಲಿ ಸರ್ಕಾರದಿಂದ 90,000 ರೂಪಾಯಿ ಬಂಡವಾಳವನ್ನು ಹಾಕಿರುವುದರಿಂದ ಸೊಸೈಟಿಯ ಆಡಳಿತವನ್ನು ಚೆನ್ನಾಗಿ ನಿರ್ವಹಿಸುವುದಕ್ಕೆ, ಸರ್ಕಾರದ ಹಿತವನ್ನು ಕಾಪಾಡುವುದಕ್ಕೆ ನಾಮಿನೇಷನ್ ಪದ್ಧತಿಯನ್ನು ಇಟ್ಟುಕೊಂಡಿದ್ದೀರಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಾಮಿನೇಷನ್ ಪಡೆಯುವುದಕ್ಕೋಸ್ಕರ ನಾವು ಹೆಚ್ಚು ಹಣವನ್ನು ಕೊಡುತ್ತೇವೆಂದು ಹೇಳುವುದು ತೀರ ಅನಮಂಜಸವಾದ ವಿಚಾರ.

Sri C. V. VENKATARAYAPPA.—It is not a fact that on a complaint to the Registrar of Co-operative Societies, he inspected the society personally and reported to Government that the society had been working satisfactorily?

Sri RAMAKRISHNA HEGDE.—The officers of the department inspect these institutions whenever they find it necessary and they also send reports.

ಶ್ರೀ ಗೋಪಾಲರಾವ್ ಮೂಡಬಿ.—105,610 ರೂಪಾಯಿ ಷೇರು ಬಂಡವಾಳವಿದ್ದ ಕಾಲಕ್ಕೆ ಸರ್ಕಾರ 90,000 ರೂಪಾಯಿಗಳನ್ನು ಯಾವ ತತ್ವದಮೇಲೆ ಸೊಸೈಟಿಗೆ ಕೊಟ್ಟಿದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದರಲ್ಲಿ ಎರಡು ವಿಚಾರಗಳಿವೆ. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯ ವ್ಯವಹಾರಕ್ಕಾಗಿ ಕೊಟ್ಟಿದ್ದು ಮತ್ತು ಪ್ರೊಸೆಸಿಂಗ್ ಆಕ್ಟಿವಿಟಿಯ ಬಗ್ಗೆ ಕೊಟ್ಟದ್ದು ಎರಡೂ ಇದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರದವರು ಸಣವನ್ನು ಸೊಸೈಟಿಗಳಿಗೆ ಕೊಡುವಾಗ, share capital subscribe ಮಾಡುವಾಗ, ಬೇರೆ ಬೇರೆ ರೀತಿನೀತಿಗಳನ್ನನುಸರಿಸುತ್ತಾರೆಯೇ ಅಥವಾ ಏಕರೂಪವಾದ ರೀತಿನೀತಿಗಳನ್ನನುಸರಿಸುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಬೇರೆ ಬೇರೆ ನೀತಿಯನ್ನನುಸರಿಸುವುದಿಲ್ಲ. ಪ್ರತಿಯೊಂದು ಸಂಘಕ್ಕೂ ಹೊಸ ನೀತಿಯನ್ನು ನುಸರಿಸಿದರೆ ಯೋಗ್ಯವಲ್ಲ. ನಾವು ಕೆಲವೊಂದು ತತ್ವಗಳಮೇರೆ ಮತ್ತು ಕೇಂದ್ರ ಸರ್ಕಾರದವರು ಹಾಕಿಕೊಟ್ಟ ತತ್ವಕ್ಕನುಸಾರವಾಗಿ ಇದನ್ನು ಮಾಡುತ್ತಿದ್ದೇವೆ.

ಶ್ರೀ ಎಸ್. ಎಂ. ಕೃಷ್ಣ.—ಕೋ-ಆಪರೇಟಿವ್ ಸೊಸೈಟಿಗಳಿಗೆ ಸರ್ಕಾರದವರು ನಾಮಕರಣ ಮಾಡತಕ್ಕ ನೀತಿಯನ್ನು ಬಿಟ್ಟುಬಿಡುತ್ತಾರೆಂದು ಮೂರು ನಾಲ್ಕು ತಿಂಗಳ ಕೆಳಗೆ ಭಾಷಣದಲ್ಲಿ ಮಾನ್ಯ ಮಂತ್ರಿಗಳು ತಿಳಿಸಿದ್ದರು. ಇಪ್ಪೊತ್ತಿನ ದೃಷ್ಟಿಯಲ್ಲಿ ಸರ್ಕಾರದವರು ಈ ನಾಮಕರಣ ಪದ್ಧತಿಯನ್ನು ಕೈ ಬಿಡುತ್ತಾರೆಯೇ ? ಆ ವಿಚಾರದಲ್ಲಿ ತಮ್ಮ ನಿಲುವು ಏನು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಮ್ಮ ನಿಲುವು ಏನೆಂದು ಹೇಳಿದ್ದೇನೆ. ಅದನ್ನು ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆ. ಎಲ್ಲಿ ಸರ್ಕಾರ ಹಣವನ್ನು ಬಹಳ ದೊಡ್ಡ ಪ್ರೊತ್ಸಾದಲ್ಲಿ ಹಾಕಿಲ್ಲವೋ ಅಂಥಲ್ಲಿ ನಾವು ಸರ್ಕಾರದ ಪರವಿಯಿಂದ ಪ್ರತಿನಿಧಿಗಳನ್ನು ನೇಮಿಸಬಾರದೆಂದು ನಿರ್ಣಯ ತೆಗೆದುಕೊಂಡಿದ್ದೇವೆ.

ಶ್ರೀ ಗೋಪಾಲರಾವ್ ಮುದಬಿ.—ತಾವು "processing unitಗೆ matching contribution" ಮಾಡಿದ್ದೇವೆಂದು ಹೇಳಿದ್ದೀರಿ. ಇನ್ನಿತರ ಸಂಸ್ಥೆಗಳಲ್ಲಿ ಈ ಪ್ರಕಾರ ಎಲ್ಲಾದರೂ ಸಾಲ ಕೊಟ್ಟಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅನೇಕ ಸಂಸ್ಥೆಗಳಿಗೆ ಕೊಟ್ಟಿದ್ದೇವೆ. ಬದರೆಯಲ್ಲಿಯೂ ಕೊಟ್ಟಿದ್ದೇವೆಂದು ಕಾಣುತ್ತದೆ.

ಶ್ರೀ ಜಿ. ರಾಮೇಗೌಡ.—1961-62ನೇ ಸಾಲಿನ ಆಡಿಟ್ ವರದಿಯಲ್ಲಿ ಈ ಸೊಸೈಟಿಯು ಸಮರ್ಪಕವಾಗಿ ಕೆಲಸ ಮಾಡಿಲ್ಲವೆಂದು ತಿಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನು ಇನ್ನೊಂದು ಸಂದರ್ಭದಲ್ಲಿ ಈ ಮಾನ್ಯ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಬಿ. ಚನ್ನಬೈರೇಗೌಡ.—ಈ ಸೊಸೈಟಿಯ ಆಡಿಟ್ ರಿಪೋರ್ಟಿನಲ್ಲಿ, ಅಕ್ರಮಗಳು, ಅನ್ಯಾಯಗಳು ನಡೆದಿವೆ. ಸೊಸೈಟಿ ಸರಿಯಾಗಿ ನಡೆಯುತ್ತಿಲ್ಲವೆಂದು ತಿಳಿಸಿದ್ದಾರೆ. ಇನು ಮುಂದೆ ಇಂಥ ಅಕ್ರಮಗಳು ನಡೆಯದೆ ಇರುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಜೆ. ಲಿಂಗೇಗೌಡ.—ಷೇರು ಬಂಡವಾಳವಲ್ಲದೆ ಸರ್ಕಾರದಿಂದ ಈ ಸೊಸೈಟಿಗೆ ಎಷ್ಟು ಹಣವನ್ನು ಸಾಲವಾಗಿ ಕೊಟ್ಟಿದ್ದೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಎಷ್ಟು ಹಣ ಕೊಟ್ಟಿದ್ದೇವೆಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಲಾರಿಯನ್ನು ಕೊಳ್ಳಲಕ್ಕೆ ಸಾಲ ಕೊಟ್ಟಿದ್ದೇವೆ, ಗೋಡೌನ್‌ಗಾಗಿ ಕೊಟ್ಟಿರಬಹುದೋ ಏನೋ, ಗೊತ್ತಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಸೊಸೈಟಿ ಸಮರ್ಪಕವಾಗಿ ಕೆಲಸ ಮಾಡದೆ ಇದ್ದರೂ ಒಂದು ಲಕ್ಷ ರೂಪಾಯಿ ಬಂಡವಾಳದಲ್ಲಿ 90,000 ರೂಪಾಯಿಗಳನ್ನು ಸರ್ಕಾರದವರು ಷೇರು ಕಾಂಟ್ರಿಬ್ಯೂಷನ್ ಆಗಿ ಕೊಟ್ಟಿದ್ದೀರಿ. ಅಂಥ ಹೆಚ್ಚಿನ ಮೆಹರತ್ತು ಏನು, ಸ್ವಾಮಿ ?

Sri RAMAKRISHNA HEGDE.—It is a hypothetical question. ಸಮರ್ಪಕವಾಗಿ ಕೆಲಸಮಾಡದೆ ಇದ್ದರೂ ಕೊಟ್ಟಿದ್ದೇವೆಂದು ಅವರು ಹೇಳುತ್ತಾರೆ. ನಾವು ಹಣವನ್ನು ಕೊಡತಕ್ಕ ಕಾಲದಲ್ಲಿ ಸಮರ್ಪಕವಾಗಿ ಕೆಲಸ ಮಾಡುತ್ತಿದೆ ಎಂದು ಗ್ರಹಿಸಿಕೊಂಡು ಕೊಟ್ಟಿದ್ದೇವೆ. ಅಲ್ಲದೇ ಈ ಹಣವನ್ನು ಒಂದೇ ವರ್ಷದಲ್ಲಿ ಕೊಟ್ಟಿದ್ದಲ್ಲ. 1956-57 ರಿಂದ 1962-63ರ ವರೆಗೂ ಸೇರಿ 90,000 ರೂಪಾಯಿ ಕೊಟ್ಟಿದ್ದೇವೆ.

Indankal Medium Size Project in Chitapur Taluk, Gulbarga District.

*Q.—654. Sri S. RUDRAPPA (Kalgi).—

Will the Government be pleased to state :—

(*a*) whether it is a fact that Indankal Medium Size Project in Chitapur Taluk, Gulbarga District, has been surveyed and necessary estimate has been prepared ?

(*b*) the number of medium sized projects in Gulbarga District included in Third Five-Year Plan ?